doc-601
T-P-2

Reg No B C 155 6 12 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತ ಬಂಗ್ಲಾ ಅಧಿಕರ ಆಶಯ ಶಾಂತಿ ಸೌಹಾರ್ದ

ಚಾಮರಾಜನಗರ ಅರಣ್ಯ ವಿಭಾಗ

ವಿಭಾಗ ಅರಣ್ಯಾಧಿಕಾರಿಯವರು
ಚಾಮರಾಜನಗರ

★

ಪ್ರಕಟಣೆ

ನಂ. ಎಲಿ-107-ಟಿಡಿಆರ್/72-73
ತಾ॥ 24-11-1972

★

1973 ನೇ ಕ್ಯಾಲೆಂಡರ್ ವರ್ಷಕ್ಕೆ ಅಥವಾ ಮುಂದಿನ ಕಂಟ್ರಾಕ್ಟ್ ವರೆಗೆ, ಯಾವದು ತಡವೋ ಅದಕ್ಕೆ, ಚಾಮರಾಜನಗರ ವಿಭಾಗವಲ್ಲಿರುವ ಆನೆಗಳಿಗೆ ರೇರ್ಷ ಸರಬರಾಜು ಮಾಡಲು ಟೆಂಡರ್

ಪ್ರತಿಯೊಂದು ಫಾರಂಗೆ ರೂ. 5/- (ಐದು) ಮಾತ್ರ, ಜೊತೆಗೆ ಜಾರಿಯಲ್ಲಿ ಇರುವ ಮಾರಾಟ ತೆರಿಗೆ (ವಾಪಸು ಮಾಡಲಾಗದ) ಇದನ್ನು ಪಾವತಿ ಮಾಡಿ, ಈ ಕಚೇರಿಯಿಂದ ಪಡೆದ ವಿಧ್ಯುಕ್ತವಾದ ಫಾರಂನಲ್ಲಿ ಮೊಹರಾದ ಮತ್ತು ಹೆಸರು ಬರೆದ ಟೆಂಡರ್‌ಗಳನ್ನು ಚಾಮರಾಜನಗರದಲ್ಲಿರುವ ವಿಭಾಗ ಅರಣ್ಯ ಅಧಿಕಾರಿಯವರಿಂದ ಅಥವಾ ಅವರಿಂದ ಅಧಿಕಾರ ಪಡೆದ ಇತರ ಯಾವುದೇ ಅಧಿಕಾರಿಯವರಿಂದ ಈ ಕಚೇರಿಯಲ್ಲಿ, ಮೇಲ್ಕಂಡ ಕೆಲಸಕ್ಕಾಗಿ 20-12-1972 ರಂದು ಮಧ್ಯಾಹ್ನ 3 ಗಂಟೆಯವರೆಗೆ ಸ್ವೀಕರಿಸಲಾಗುವುದು.

ಟೆಂಡರ್ ಫಾರಂಗಳು 20-12-1972 ರ ಮಧ್ಯಾಹ್ನ 2 ಗಂಟೆಯವರೆಗೆ ಕೊಡಲಾಗುವುದು.

ಜಾಲ್ತಿಯಲ್ಲಿರುವ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆಯನ್ನು ಪಾವತಿ ಮಾಡಿದ ಸರ್ಟಿಫಿಕೇಟ್‌ಗಳನ್ನು ಮತ್ತು ಟೆಂಡರ್ ಸಲ್ಲಿಸಲು ಇರುವ ತಾರೀಖಿಗೆ ಮೂರು ತಿಂಗಳಿಗಿಂತ ಮುಂಚೆ ಇಲ್ಲದ ತಕ್ಕ ರೆವಿನ್ಯೂ ಅಧಿಕಾರಿಗಳಿಂದ ಪಡೆದ ರೂ 10000 (ಹತ್ತು ಸಾವಿರ ರೂಗಳು) ಮಾತ್ರದ ವರೆಗಿನ ಸಾಲ್ವೆನ್ಸಿ ಸರ್ಟಿಫಿಕೇಟ್

ನ್ನೂ, ಚಾಮರಾಜನಗರದಲ್ಲಿರುವ, ವಿಭಾಗ ಅರಣ್ಯ ಅಧಿಕಾರಿಯವರ ಹೆಸರಿಗೆ ಖಜಾನೆ / ಬ್ಯಾಂಕು / ಪಾವತಿ ಮಾಡಿದ ಚಲ್ತಿ ಅಥವಾ ಯಾವುದಾದರೂ ಷೆಡ್ಯೂಲ್ಡ್ ಬ್ಯಾಂಕುಗಳ ಮೂಲಕ ಪಡೆದ ಡಿಮಾಂಡ್ ಡ್ರಾಫ್ಟ್, ಈ ಮೂಲಕ ರೂ. 500/- (ಐದು ನೂರು) ಅಸ್ನಿಸ್ಟ್ ಹಣ ಠೇವಣಿ ಯೊಡನೆ ಟೆಂಡರ್ ಇರಬೇಕು

ಕಚೇರಿ ಕೆಲಸದ ವೇಳೆಗಳಲ್ಲಿ ಯಾವುದೇ ಕೆಲಸದ ದಿನಗಳಲ್ಲಿ ಈ ಕಚೇರಿಯಿಂದ ಹೆಚ್ಚು ವಿವರಗಳನ್ನು ಪಡೆಯಬಹುದು.

ಸಹಿ/- ಸಯ್ಯದ್ ಅಹಮದ್
ವಿಭಾಗ ಅರಣ್ಯ ಅಧಿಕಾರಿಯವರು
ಚಾಮರಾಜನಗರ

ಉಗುರಿನ ರಾಜ

ಕಲ್ಕತ್ತಾ— ಜಾದನವ್ಪರದ 30 ವರ್ಷದ ಮುರಾರಿ ಮೋರ್ಕ ಆದಿತ್ಯ ಉಗುರು ಬೆಳೆಸಿರುವವರಲ್ಲಿ ಭಾಂಪಿರ್ಯ ಎಂದು ಗ್ಯುಯಿನೆಸ್ ಸುಪರ್ಲೆಟಿವ್ ಸಂಸ್ಥೆ ಸಂಪಾದಕ ಮಾರಿಸ್ ಮೆಕ್ಕಿರ್ಟರ್ ಅವರಿಗೆ ಈಚೆಗೆ ಕಾಗದ ಬರೆದಿರುವರು – ಈತನು ತನ್ನ ಸ್ನೇಹಿತೆಯ ಪ್ರೇರಣೆಯಂತೆ 11 ವರ್ಷಗಳಿಂದ ತನ್ನ ಎಡದ ಕೈ ಬೆಟ್ಟುಗಳ ಉಗುರನ್ನು ಬೆಳೆಸುತ್ತಿದ್ದು "ಉಗುರಿನ ರಾಜ" ಎಂದು ಕರೆಯಲ್ಪಡುತ್ತಿದ್ದಾನೆ – ಆತನ ಉಗುರಿನ ಒಟ್ಟು ಉದ್ದ 1.2 ಮಿಟರಷ್ಟಿದೆ ; ಅತಿ ಉದ್ದದ್ದು ಆತನ ಉಂಗುರದ ಬೆರಳಿನದ್ದು 26 2 ಸಿಎಂ ಆಗಿದೆ !

ಕೈಕಚ್ಚಿ, ಕೆಲಸ ಕಳೆದುಕೊಂಡಳು

ನ್ಯೂಬರ್ನ್ಸ್ (ಇಂಗ್ಲೆಂಡ್)— ಸ್ಥಳೀಯ ಶಾಲೆಯ ಯುವತಿ-ಉಪಾಧ್ಯಾಯಿನಿಯು, ತನ್ನ ಶಾಲೆಯ 6 ವರ್ಷದ ವಿದ್ಯಾರ್ಥಿಯು ಮತ್ತೊಬ್ಬ ವಿದ್ಯಾರ್ಥಿಯ ಕೈಯನ್ನು ಕಚ್ಚಿದ್ದಕ್ಕಾಗಿ, ಅವನನ್ನು ಬೈದು ಅವನ ಕೈಯನ್ನು ತಾನು ಕಚ್ಚಿದಳು – ಅವಳನ್ನು ಕೆಲಸದಿಂದ ತೆಗೆದುಹಾಕಲಾಗಿದೆ

ತಿಂಡಿ ಬೆಲೆ ತಗ್ಗಿಸಲು

ಹಾಸನ— ಹೋಟಲುಗಳಲ್ಲಿ ತಿಂಡಿಬೆಲೆ ತಗ್ಗಿಸಲು ಒತ್ತಾಯಕ್ಕಾಗಿ, ವಿದ್ಯಾರ್ಥಿಗಳು ಭಾರಿ ಮೆರವಣಿಗೆ ನಡೆಸಿದರು – ವಿದ್ಯಾರ್ಥಿಗಳ ನಾಯಕರೊಡನೆ ಹೋಟಲಿನವರು ಮಾತುಕತೆ ನಡೆಸಿ ವ್ಯವಸ್ಥೆ ಮಾಡುವರೆಂದು ಜಿಲ್ಲಾಧಿಕಾರಿಗಳೂ ಪೋಲೀಸು ಸೂಪರಿಂಟೆಂಡೆಂಟರೂ ಭರವಸೆಇತ್ತರು

★

ಸ್ಪೀಕರರ ರಿಟ್

ಮದರಾಸು— ಸ್ಪೀಕರ್ ಶ್ರೀ ನಾಥಿಯಲಗಂ ಶನಿವಾರ ಶಾಸನಸಭೆಯಲ್ಲಿ ನಡೆದ ವಿಷಯದ ಬಗ್ಗೆ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕಿರುವರು.

★

ಆಂಧ್ರ, ಬಂದ್

ಹೈದರಾಬಾದು— ಮುಲ್ಕಿ ವಿರುದ್ಧ ನಿನ್ನೆ ನಡೆದ ಆಂಧ್ರ ಬಂದ್ ಶಾಂತಿಯುತವಾಗಿ ಯಶಸ್ವಿಯಾಗಿ ನಡೆಯಿತು – ವಕೀಲರೂ, ಇತರ ವೃತ್ತಿಕಾರರೂ ಭಾಗವಹಿಸಿದ್ದರು – ಬಂದ್‌ನಿಂದ ಎಲ್ಲಾ ತಳಮಳಿಸಿತ್ತು –ತಿರುಪತಿ– ತಿರುಮಲೈನಲ್ಲಿ ಹೋಟಲುಗಳೆಲ್ಲಾ ಮುಚ್ಚಲಾಗಿದ್ದುದರಿಂದ ಭಕ್ತರಿಗೆ ದೇವಾಲಯದ ಪ್ರಸಾದವು ಉಚಿತವಾಗಿ ಕೊಡಲಾಯಿತು.

★

144 ನೇ ಸೆಕ್ಷನ್ ಜಾರಿ

ಬಾಗಲಕೋಟೆ – ವಿದ್ಯಾರ್ಥಿಗಳ ಮುಷ್ಕರ ಮತ್ತು ಗಲಾಟೆಗಾಗಿ ಬಾಗಲಕೋಟೆ ನಗರ ಮತ್ತು 10 ಮೈಲಿ ಸುತ್ತಮುತ್ತ 144 ನೇ ಸೆಕ್ಷನ್ ಜಾರಿಮಾಡಲಾಗಿದೆ.

●

ಸಕ್ಕರೆ

ನವದೆಹಲಿ— ಕೇಂದ್ರ ಸರಕಾರ ಜನವರಿಯಲ್ಲಿ ಸಕ್ಕರೆ ಕಾರ್ಖಾನೆಗಳ 2 75 ಲಕ್ಷ ಟನ್ ಸಕ್ಕರೆ ಬಿಡುಗಡೆ ಮಾಡಲು ಆಜ್ಞೆ ಮಾಡಿದೆ.

ಶಾಂತಿ ಸೌಹಾರ್ದ ಗಡಿ

ನವದೆಹಲಿ— ಭಾರತ ಮತ್ತು ಬಂಗ್ಲಾ ದೇಶದ ಅಧ್ಯಕ್ಷರುಗಳು, ಎರಡು ದೇಶದಲ್ಲಿನ ಮಧ್ಯೆಯ ಗಡಿ ಯಾವಾಗಲೂ ಶಾಂತಿ ಮತ್ತು ಸೌಹಾರ್ದ ಗಡಿಯಾಗಿರುವದೆಂಬ ಆಶಯವನ್ನು ವ್ಯಕ್ತಪಡಿಸಿರುವರು.

★

ಅಂತರಾಷ್ಟ್ರೀಯ ವಿಶ್ವವಿದ್ಯಾಲಯ

ವಿಶ್ವಸಂಸ್ಥೆ— ವಿಶ್ವಸಂಸ್ಥೆಯ ಒಂದು ಭಾಗವಾಗಿ ಅಂತರಾಷ್ಟ್ರೀಯ ವಿಶ್ವವಿದ್ಯಾಲಯದ ಸ್ಥಾಪನೆಗೆ ವಿಶ್ವವಿದ್ಯಾನಿಲಯ ಸ್ಥಾಪನೆಗೆ ವಿಶ್ವಸಂಸ್ಥಾ ಅಧಿಕಾರಿಗಳು ಒತ್ತಾಯ ಮಾಡಿದ್ದಾರೆ, –

●

ಸಣ್ಣ ಉಳಿತಾಯ

ಮೈಸೂರು— 71-72 ರಲ್ಲಿ ಗುರಿ ಮೀರಿ ಜಿಲ್ಲೆಯಲ್ಲಿ ಚಿಕ್ಕ ಉಳಿತಾಯ ಶೇಖರಣೆ ನಡೆಸಿದ ಅಧಿಕಾರಿಗಳಿಗೆ ಹಣ ಪ್ರಶಸ್ತಿತೋಷಕ ಕೊಡಲಾಗಿದೆ.

●

ವೇಶ್ಯೆಯರ ರಿಟ್ ಅರ್ಜಿ

ಅಲಹಾಬಾದು— ವೇಶ್ಯೆಯರು ವಾಸಿಸುತ್ತಿರುವ ಕೆಂಪು ದೀಪದ ಭಾಗದಲ್ಲಿಯ ತಮ್ಮ ನಿವಾಸದಿಂದ ಹೊರಟುಹೋಗಬೇಕೆಂದೂ, ತಪ್ಪಿದರೆ ಬಲಾತ್ಕಾರವಾಗಿ ಓಡಿಸಲಾಗುವದೆಂಬ ಪೋಲೀಸರ ಕಾರ್ಯ ವಿರುದ್ಧ ವೇಶ್ಯೆಯರು ಹಾಕಿದ ರಿಟ್ ಅರ್ಜಿಗಳು ಹೈಕೋರ್ಟ್‌ನಲ್ಲಿ ಅಡ್ಮಿಟ್ ಆಗಿ ತಡೆ ಆಜ್ಞೆ ಕೊಡಲಾಗಿದೆ.

○

ಪುರಸಭೆ

ಮೈಸೂರು— ನವೆಂಬರು ಮಾಹೆಯಮುಂದುವರಿದ ಪುರಸಭಾಧಿವೇಶನವು ತಾ॥ 12 ಶುಕ್ರವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದು.

ವುಡ್‌ಲಾಂಡ್ಸ್ 1 12 72 ರಿಂದ ಅಮೋಘ ಪ್ರಾರಂಭ

ಆಲ್ ಇಂಡಿಯಾ ಪಿಕ್ಚರ್ಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ದಿಲ್ ದೌಲತ್ ದುನಿಯಾ

ಪಾತ್ರ – ರಾಜೇಶ್ ಖನ್ನ, ಸಾಧನ, ಅಶೋಕ ಕುಮಾರ್, ಹೆಲೆನ್,
ಓಂ ಪ್ರಕಾಶ್ ಸಂಗೀತ : ಶಂಕರ್ ಜೈಕಿಶನ್ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10-30 ಬೊಲಾದ್

ಅ ಪೆ ರಾ 1 12 72 ರಿಂದ

ಅತ್ಯಮೋಘ ಹಿಂದಿ ಗೇವ ಕಲರ್ ಚಿತ್ರ

ಏಕ್ ಬಾರ್ ಮುಸ್ಕುರಾದೊ

ಪಾತ್ರ : ಜಾಯ್ ಮುಖರ್ಜಿ, ತನುಜಾ, ದೇವ್ ಮುಖರ್ಜಿ
ಸಂಗೀತ – ಓ. ಪಿ. ನಯ್ಯರ್ ದಿನ 3 ಪ್ರದರ್ಶನಗಳು



Protect the Cow

Help The Gorakshana

— Humanitarian Propoganda Monthly....

Edited Printedand Published by Dharmapracharanirata M S Krishna Rao (Propretor) at the Satvavad Press, Chamarajapuram Mysore

Quality Printing Neat Binding

Lakshminarasimha Press

Sivarampet. Mysore

ಅಖಿಲ ಭಾರತ ಬ್ರಾಹ್ಮಣ ಸಮಾಜ ಸ್ಥಾಪನೆ ಯತ್ನ

(ಸ್ವಂತ ಸುದ್ದಿಗಾರರಿಂದ)

ಬೆಂಗಳೂರು 4— ನಿನ್ನೆ ಇಲ್ಲಿಯ ನರಸಿಂಹರಾಜ ಕಾಲನಿ ರಾಮಮಂದಿರದಲ್ಲಿ ಬ್ರಾಹ್ಮಣ ಯುವಜನ ಸಭಾದವರು ಕರ್ನಾಟಕ ಬ್ರಾಹ್ಮಣ ಸಮ್ಮೇಳನ ನಡೆಸಿ ಅಖಿಲ ಭಾರತ ಬ್ರಾಹ್ಮಣ ಸಮಾಜ ಸ್ಥಾಪನೆಗೆ ಪ್ರಯತ್ನ ಕೈಗೊಳ್ಳಲು ಸಂಕಲ್ಪಿಸಿದರು.

ಬ್ರಾಹ್ಮಣರು ಮಾನವ ಸಮಾಜದ ಒಂದು ಭಾಗವಾಗಿದ್ದು ಭಾರತದ ಐಕ್ಯ ಸ್ಥಾಪನೆ ದೃಷ್ಟಿಯಿಂದ ಈ ಸಮ್ಮೇಳನ ಕರೆದುದಾಗಿಯೂ, ಬ್ರಾಹ್ಮಣ ಸಮಾಜವು ತನ್ನ ಧರ್ಮ ಪಾಲಿಸುವುದರ ಮೂಲಕ ಐಕ್ಯಸಾಧಿಸುವುದಾಗಿ ಸಮ್ಮೇಳನದಲ್ಲಿ ಪ್ರಧಾನ ಪಾತ್ರ ವಹಿಸಿದ ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು ಸ್ಪಷ್ಟಪಡಿಸಿದರು

ಬ್ರಾಹ್ಮಣರಲ್ಲಿ ಆರ್ಥಿಕವಾಗಿ ಅಶಕ್ತರು, ಬಡ ವಿದ್ಯಾರ್ಥಿಗಳು ಇವರಿಗೆ ಈ ಸಮ್ಮೇಳನ ನೆರವಾಗಬೇಕೆಂದೂ, ವರದಕ್ಷಿಣೆ ಪದ್ಧತಿ ತೊಡೆದುಹಾಕಲು ನೆರವಾಗಬೇಕೆಂದೂ, ಸಂಸ್ಕೃತ ಭಾಷೆ ಹಾಗೂ ವೇದ–ಶಾಸ್ತ್ರಗಳ ಅಧ್ಯಯನಕ್ಕೆ ಪ್ರೋತ್ಸಾಹ ನೀಡಲು ಸಮ್ಮೇಳನ ಪ್ರಧಾನವಾಗಿ ನಿರ್ಣಯಿಸಿತು.

ವಿದ್ಯಾಮಂತ್ರಿ ಶ್ರೀ ಬದರಿನಾರಾಯಣ್‌ರವರು ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡಿದರು. ಆಗ ಎದುರಿಗಿದ್ದ ಅಲಾರಂ ಗಡಿಯಾರ ಅಲಾರಂ ಹೊಡೆಯಿತು !

ಸಮ್ಮೇಳನಾರಂಭಕ್ಕೆ ಮುಂಚೆ " ಜಾತೀಯತಾ ವಾದಕ್ಕೆ ಧಿಕ್ಕಾರ ' ಎಂದು ಯುವಕನೊಬ್ಬನು ವೇದಿಕೆ ಮೇಲೆ ನಿಂತು, ಪ್ಯಾಂಟ್ ಜೋಬಿನಿಂದ ಕರಿಬಟ್ಟೆ ತುಣುಕು ತೆಗೆದು ಬೀಸುತ್ತಾ ಕೂಗಿದನು. ಸಭಿಕರಲ್ಲಿ ಹಲವರು ಅವನ ಮೇಲೆ ಕೈಮಾಡಿ ಪೋಲೀಸರ ವಶಕ್ಕೆ ಬಿಟ್ಟರು.

ಚಪ್ಪರದ ಹೊರಗೂ ಫೋಟೊಪ್ರದರ್ಶನ ನಡೆದಿತ್ತು. ಸಚಿವರು ಈ ಪ್ರತಿ ಭಟನೆಗಳು ಅರ್ಥವಿಲ್ಲವೆಂದೂ, ಬ್ರಾಹ್ಮಣ ಸಭೆ ಯಾರನ್ನೂ ದ್ವೇಷಿಸುವುದಿಲ್ಲವೆಂದೂ ನುಡಿದರು.

ಹಾಸನದ ಪ್ರತಿನಿಧಿಗಳು ತಮ್ಮೂರಲ್ಲಿ ಮುಂದಿನ ಸಮ್ಮೇಳನ ಸೇರಲು ಕೋರಿ ಇತ್ತರು.

ಧ್ವಜ ದಿನಚರಣೆ ★ 7ನೇ ಡಿಸೆಂಬರ್

.... ಆಚರಿಸಲಾಗುತ್ತದೆ ....

ಅಂದು 25 ಪೈಸೆ ಮೌಲ್ಯದ ಸಾಂಕೇತಿಕ ಧ್ವಜ ಹಾಗೂ ರೂ. 2 ಮೌಲ್ಯದ ಧ್ವಜಗಳನ್ನು ಮಾರಲಾಗುತ್ತದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಇವನ್ನು 5 ಪೈಸೆಗೂ, ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ 10 ಪೈಸೆಗೂ ಮಾರಲಾಗುವುದು.

ಅಂದು ಧ್ವಜವನ್ನು ಕೊಂಡು, ಧ್ವಜ ದಿನಾಚರಣೆ ನಿಧಿಗೆ ಕಾಣಿಕೆ ಸಲ್ಲಿಸಬೇಕೆಂದು ರಾಜ್ಯ ಸರಕಾರ ಸಾರ್ವಜನಿಕರಲ್ಲಿ ವಿನಂತಿಸಿಕೊಂಡಿದೆ. ಈ ನಿಧಿಯನ್ನು ರಕ್ಷಣಾ ದಳಗಳ ಸಿಬ್ಬಂದಿಯ ಕಲ್ಯಾಣಕ್ಕಾಗಿ ಉಪಯೋಗಿಸಲಾಗುತ್ತದೆ.

SHAKTI SUDHA

A Superb Tonic